**ಪಿಡಬ್ಲೂ : 01**

**ಇಂದು ದಿನಾಂಕ:08.02.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 1 ಮತ್ತು 3 ರಿಂದ 5 ನೇ ಪ್ರತಿವಾದಿ ಪರ ಶ್ರೀ.ಬಿ.ಎಂ.ಕೆ.ವಕೀಲರಿಂದಃ**

ಭಾಗ ಕೇಳಿ ದಾವೆ ಮಾಡಿದ್ದೇನೆ. ನನ್ನ ತಂದೆಯ ತಂದೆ ಮಾದ್ದಪ್ಪನಿಗೆ ಇಬ್ಬರು ಗಂಡು ಮಕ್ಕಳು. ಅವರಿಗೆ ಹೆಣ್ಣು ಮಕ್ಕಳು ಇರಲಿಲ್ಲ. ಮಾದ್ದಪ್ಪನಿಗೆ ಅಬ್ಬೂರು ಗ್ರಾಮದಲ್ಲಿ ಸರ್ವೆ ನಂ.1/1 ರಲ್ಲಿ ಜಮೀನು ಇದೆ. ಅದರಲ್ಲಿ 2 ಎಕರೆ 34 ಗುಂಟೆ ಜಮೀನು ಇದೆ. ಮಾದ್ದಪ್ಪನಿಗೆ ಎರಡು ಮನೆಗಳು ಇವೆ. ಸದರಿ ಮನೆಗಳನ್ನು ದಾವೆಯಲ್ಲಿ ಸೇರಿಸಿದ್ದೇನೆ. ಅವುಗಳ ನಂಬರ್ ಮತ್ತು ಅಸೆಸಮೆಂಟ್ ಮತ್ತು ಜಂಜರ್ ನಂಬರ್ ಗೊತ್ತಿಲ್ಲ. ಅವುಗಳ ವಿಸ್ತೀರ್ಣ ಗೊತ್ತಿಲ್ಲ. ಅವುಗಳ ಖಾತೆ ಈಗ ನನ್ನ ಚಿಕ್ಕಪ್ಪ ಸಣ್ಣಪ್ಪನ ಹೆಸರಿನಲ್ಲಿ ಇವೆ.

ನನ್ನ ತಂದೆ ತೀರಿಕೊಂಡು ಸುಮಾರು 40 ವರ್ಷ ಆಗಿದೆ. ನನ್ನ ಚಿಕ್ಕಪ್ಪ ತೀರಿಕೊಂಡು ಇಲ್ಲಿಗೆ ಸುಮಾರು 4 ವರ್ಷ ಆಗಿದೆ. 1980-81 ರಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಭಾಗ ಮಾಡಿಕೊಂಡಿದ್ದಾರೆ. ಭಾಗದ ಪ್ರಕಾರ ಕಂದಾಯ ದಾಖಲೆಗಳು ಅವರ ಹೆಸರಿಗೆ ಆಗಿರುತ್ತವೆ. ವಿಭಾಗದ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಪ್ರತ್ಯೇಕವಾಗಿ ಬೇರೆ ಬೇರೆ ಮನೆಗಳಲ್ಲಿ ವಾಸ ಇದ್ದರು. ನನ್ನ ತಂದೆ ತೀರಿಕೊಂಡ ನಂತರ ನನ್ನ ಮತ್ತು ನನ್ನ ತಮ್ಮನ ಹೆಸರನ್ನು ಕಂದಾಯ ದಾಖಲೆಗಳಲ್ಲಿ ಸೇರಿಸಿಲ್ಲ. ನನ್ನ ಮದುವೆಯ ಪೂರ್ವದಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡಾಗ ನನಗೆ ಸುಮಾರು 6 ವರ್ಷ ವಯಸ್ಸು ಇತ್ತು. ನನ್ನ ತಂದೆ ತೀರಿಕೊಂಡ ನಂತರದಲ್ಲಿ ನಾನು ನನ್ನ ತಾಯಿ ಮತ್ತು ನನ್ನ ಸಹೋದರ ಪ್ರತ್ಯೇಕ ವಾಸ ಇದ್ದೇವೆ.

ನನ್ನ ತಂದೆ ತೀರಿಕೊಂಡ ನಂತರ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರು ಸೇರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಆ ಕಡೆ ಗಮನ ಹರಿಸಿರಲಿಲ್ಲ ಎನ್ನುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಜಮೀನನ್ನು ನಾವು ಈಗಲ್ಲೂ ವ್ಯವಸಾಯ ಮಾಡುತ್ತಿದ್ದೇವೆ. ನನ್ನ ಚಿಕ್ಕಪ್ಪನ ಭಾಗಕ್ಕೆ ಬಂದಿರುವ ಆಸ್ತಿಯಲ್ಲಿ ಅವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಮತ್ತು ಪ್ರತಿವಾದಿ-1 ರಿಂದ 3 ರವರ ನಡುವೆ ಜಮೀನು ವಿಭಾಗದ ಬಗ್ಗೆ ತಂಟೆ ಇಲ್ಲ ಕಾರಣ ಜಮೀನು ಮೊದಲೇ ನನ್ನ ತಂದೆ ಕಾಲದಲ್ಲಿ ವಿಭಾಗ ಆಗಿರುತ್ತದೆ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**